ಶ್ರೀ ಎಚ್. ಸಿದ್ದವೀರಪ್ಪ.—ನನ್ನಲ್ಲಿ ಈಗ ಆ ಲೆಕ್ಕ ಪತ್ರಗಳಿಲ್ಲ. ನೋಟೀಸ್.

ಶ್ರೀ ಎಚ್. ಎಸ್. ರುದ್ರಪ್ಪ.—ಆ ರಿಪೇರಿ ಕೆಲಸಗಳನ್ನೆಲ್ಲಾ ತಾವೇ ಸರ್ಕಾರದ ಪರವಾಗಿ ಮಾಡಿಸಿದಿರೊ ಅಥವಾ ಬೇರೆ ಯಾವುದಾದರೂ ಕಂಪೆನಿಯವರ ಮೂಲಕ ರಿಪೇರಿ ಮಾಡಿಸಿದಿರೋ ?

ಶ್ರೀ ಎಚ್. ಸಿದ್ದವೀರಪ್ಪ.—ಕಂಪೆನಿಯವರ ಸಹಾಯವನ್ನು ಪಡೆದೇ ಮಾಡಿಸಲಾಗಿದೆ.

ಶ್ರೀ ಎಸ್. ಎಸ್. ರುದ್ರಪ್ಪ.—ಅವರು ರಿಪೇರಿ ಬಗ್ಗೆ ಎಷ್ಟು ಖರ್ಚನ್ನು ತೋರಿಸಿದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪ.—ಅವರೇನೂ charge ಮಾಡಿಲ್ಲ. ಅವರು free service render ಮಾಡಿದ್ದಾರೆ.

Grant of date reserve lands in the nighbourhood of Watadahosalli village in Goribidnur taluk.

Q.—179. **Sri A. MUNIAPPA.** (Siddlaghatta, Chikballapur—Scheduled Castes).—

Will the Government be pleased to state :—

(a) how long back the Harijans and other raiyats of Watadahosalli Village in Goribidnur Taluk give darkhasts for the grant of date reserve lands in the neighbourhood ;

(b) whether these applications have been disposed of ;

(c) if not, whether they would grant the lands asked for by the abovesaid persons, as early as possible ?

A.—**Sri Kadidal MANJAPA** (Minister for Revenue and Public Works).—

(a) During the year 1949-50.

(b) They are under consideration.

(c) The question is under consideration. The Revenue Commissioner and the Excise Commissioner are in favour of reserving the date grove.

*ಶ್ರೀ ಎ. ಮುನಿಯಪ್ಪ.—(ಅ) ಪ್ರಶ್ನೆಗೆ ಉತ್ತರವಾಗಿ 1949–50 ಎಂದು ತಿಳಿಸಿದ್ದೀರಿ. 1948ನೆಯ ಸಾಲಿನಲ್ಲಿ ಡೆಪ್ಯುಟಿ ಕಮಿಷನರು ಸ್ಥಳದ ಅಜಮಾಯಿಷಿಯಿಂದ ಮಾಡಿ ಕಳುಹಿಸಿದ ವರದಿ ಏನಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ಎಷ್ಟನೆಯ ಇಸವಿಯಲ್ಲಿ?

ಅಧ್ಯಕ್ಷರು.—ಉತ್ತರದಲ್ಲಿ 1949–50 ಎಂದು ಹೇಳಿದೆ.

ಶ್ರೀ ಕಡಿದಾಳ್ ಮಂಜಪ್ಪ.—1948ರಲ್ಲಿ ಕಳುಹಿಸಿದ ವರದಿಯು ಈಗ ನನ್ನಲ್ಲಿಲ್ಲ.

ಶ್ರೀ ಎ. ಮುನಿಯಪ್ಪ.—ಯಾವ ಯಾವ ಸರ್ವೆ ನಂಬರಿನಲ್ಲಿ ಎಷ್ಟೆಷ್ಟು ಭಾಗ ಉಪಯೋಗಕ್ಕೆ ಬರುವಂಥ ವಾಗಿದೆ, ಎಷ್ಟು ಭಾಗ ಅನುಪಯೋಗವಾಗಿದೆಯೆಂಬುದನ್ನು ಕಂಡು ಹಿಡಿಯಲು ಏನಾದರೂ ಸರ್ವೆ ನಡೆಸಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನಡೆಸಿದ್ದಾರೆ.

ಶ್ರೀ ಎ. ಮುನಿಯಪ್ಪ.—ಹಾಗಾದರೆ ಏನು ಹೊರಪಟ್ಟಿದೆಯೆಂಬುದನ್ನು ತಿಳಿಸುವಿರಾ ?

ಶ್ರೀ ಕಡಿದಾಳ್ ಮಂಜಪ್ಪ —

ಸರ್ವೆ ನಂಬರು 63 ರಲ್ಲಿ 200 ಮರಗಳಿವೆ.
" 64 ರಲ್ಲಿ ಮರಗಳಿಲ್ಲ.
" 65 ರಲ್ಲಿ 55 ಮರಗಳಿವೆ.
" 66 ರಲ್ಲಿ ಡಿಟೋ
" 67 ರಲ್ಲಿ 100 ಮರಗಳಿವೆ.
" 70 ರಲ್ಲಿ 220 ಮರಗಳಿವೆ.
" 71 ರಲ್ಲಿ 200 ಮರಗಳಿವೆ.
" 72 ರಲ್ಲಿ 210 ಮರಗಳಿವೆ.
" 73 ರಲ್ಲಿ 100 ಮರಗಳಿವೆ.
" 74 ರಲ್ಲಿ 29 ಮರಗಳಿವೆ.
" 60 ರಲ್ಲಿ 150 ಮರಗಳಿವೆ.
" 61 ರಲ್ಲಿ 500 ಮರಗಳಿವೆ.

62 ರಲ್ಲಿ and so on. ಹೀಗೆ ಒಟ್ಟು 2,909 ಮರಗಳಿರುತ್ತವೆ.

ಶ್ರೀ ಎ. ಮುನಿಯಪ್ಪ.—ತಾವು ಈ ಸರ್ವೆ ಪರಿಶೀಲನೆ ನಡೆಸಿದ್ದು ಯಾವಾಗ ?

Sri Kadidal MANJAPPA.—Notice please.

ಶ್ರೀ ಎ. ಮುನಿಯಪ್ಪ.—ಕ್ಷಾಮದ ದೆಸೆಯಿಂದ ಮರಗಳನ್ನೆಲ್ಲಾ ಹೊಡೆದು ಹಾಕುತ್ತಿರುವುದು ಸರ್ಕಾರದ ವರಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಮರಗಳಿರುತ್ತವೆಂದು ಸರಕಾರಕ್ಕೆ ವರದಿಬಂದಿದೆ. ಕಳೆದ ಫೆಬ್ರುವರಿ ತಿಂಗಳಿನಲ್ಲಿ ರೆವಿನ್ಯೂ ಕಮಿಷನರು ಖುದ್ದಾಗಿ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿಕೊಂಡು ಬಂದಿದ್ದಾರೆ.

ಶ್ರೀ ಎ. ಮುನಿಯಪ್ಪ.—ಕೆಲವು ಗ್ರಾಮಸ್ಥರು ಮತ್ತು ಹರಿಜನರು ಹೀಗೆ ಒಟ್ಟಾಗಿ 29 ಜನರು ಆ ಜಮೀನಿಗೆ ದರಖಾಸ್ತ್ ಹಾಕಿಕೊಂಡಿದ್ದುದು ತಮಗೆ ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಆ ಬಗ್ಗೆ ಸ್ಥಳ ಪರೀಕ್ಷೆ ಮಾಡಿ ವರದಿಮಾಡಬೇಕೆಂದು ರೆವೆನ್ಯೂ ಕಮಿಷನರಿಗೆ ತಿಳಿಸಲಾಗಿತ್ತು. ಅದರ ಪ್ರಕಾರ ಅವರೂ ಮತ್ತು ಎಕ್ಸೈಜ್ ಕಮಿಷನರೂ ಸ್ಥಳಕ್ಕೆ ಹೋಗಿ ಅಜಮಾಯಿಷಿ ಮಾಡಿಕೊಂಡು ಬಂದನಂತರ ಅದನ್ನು ಸಾಗುವಳಿಗೆ ಕೊಡಬಾರದೆಂದು ಸಲಹೆ ಮಾಡಿದ್ದಾರೆ.

ಶ್ರೀ ಎ. ಮುನಿಯಪ್ಪ.—ಕೆಲವು ಹರಿಜನ ಮುಖಂಡರೂ ಮತ್ತು ಗ್ರಾಮಸ್ಥರೂ ತಮ್ಮಲ್ಲಿಗೆ ನಿಯೋಗ ಬಂದಿದ್ದಾಗ ತಾವು ರೆಕಾರ್ಡನ್ನು ವೆರಿಫೈ ಮಾಡಿಸುವುದಾಗಿ ಅಪ್ಪಣೆ ಕೊಡಿಸಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎ. ಮುನಿಯಪ್ಪ.—ಆ ತನಿಖೆಯ ವರದಿ ತಮಗೆ ಎಷ್ಟು ದಿನಗಳಲ್ಲಿ ಬರುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಕಳೆದ ತಿಂಗಳು 5ನೆಯ ತಾರೀಖು ಸ್ಥಳ ಪರೀಕ್ಷೆ ಮಾಡಿ ವರದಿ ಕಳುಹಿಸಿಕೊಟ್ಟಿದ್ದಾರೆ. ಆ ವರದಿಯಾಗಲೆ ಬಂದಿದೆ. ಅದು ಪರಿಶೀಲನೆಯಲ್ಲಿದೆ.

ಶ್ರೀ ಎ. ಮುನಿಯಪ್ಪ.—ಅದನ್ನು ಬೇಗ ತೀರ್ಮಾನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡುತ್ತೇವೆ.

ಶ್ರೀ ಕೆ. ಪ್ರಭಾಕರ್.—ಹರಿಜನರೂ, ಹರಿಜನೇತರರೂ ಒಟ್ಟಾಗಿ ಸೇರಿ ಅರ್ಜಿಹಾಕಿಕೊಂಡಿದ್ದಾರೆಂಬ ಕಾರಣದ ಮೇಲೆ 1949-50ರಲ್ಲಿ ಅದನ್ನು ಫೈನಲ್ ಮಾಡದೆ ಕೈ ಬಿಟ್ಟರೆಂಬುದು ನಿಜವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ರೆವೆನ್ಯೂ ಲ್ಯಾಂಡಾಗಿರುವುದಿಲ್ಲ. ಅದು ಎಕ್ಸೈಜ್ ಇಲಾಖೆಯ ಜಮೀನು. ಅದನ್ನು ರೆವೆನ್ಯೂ ಇಲಾಖೆಗೆ ವರ್ಗಾವಣೆ ಮಾಡಿಕೊಳ್ಳಲು ಕೊಂಚ ಕಾಲ ಹಿಡಿಯುತ್ತದೆ.

Mr. SPEAKER.—He has understood your question. Any other question ? No.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಆ ಪ್ರದೇಶವನ್ನು ಅವರು ಖುದ್ದಾಗಿ ಸ್ಥಳಕ್ಕೆ ಹೋಗಿ ನೋಡಿದ ನಂತರ ಕಳುಹಿಸಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಚ್. ಸಿ ನಾಗಯ್ಯರೆಡ್ಡಿ.—ಹಾಗಿದ್ದರೆ ಮೊದಲು ಅವರು ಸ್ಥಳಕ್ಕೆ ಹೋಗದೆ ಹಾಗೆಯೇ ರಿಪೋರ್ಟು ಕಳುಹಿಸಿದ್ದರೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ. 1953ನೇ ಫೆಬ್ರುವರಿ 5ನೇ ತಾರೀಖಿನಲ್ಲಿ ಪುನಃ ಅದೆಲ್ಲವನ್ನೂ ವಿಮರ್ಶೆ ಮಾಡಿ ವರದಿಮಾಡಿದ್ದಾರೆ.

ಶ್ರೀ ಎಚ್. ಸಿ ನಾಗಯ್ಯರೆಡ್ಡಿ.—ಸ್ಥಳಕ್ಕೆ ಯಾರು ಯಾರು ಹೋಗಿದ್ದರು ?

ಶ್ರೀ ಕಡಿದಾಳ್ ಮಂಜಪ್ಪ.—ರೆವೆನ್ಯೂ ಕಮಿಷನರು ಎಕ್ಸೈಜ್ ಕಮಿಷನರ್ ಮತ್ತು ಡೆಪ್ಯುಟಿ ಕಮಿಷನರ್ ಇಷ್ಟು ಜನಗಳು ಹೋಗಿದ್ದರು.

ಶ್ರೀ ಜಿ. ದುಗ್ಗಪ್ಪ.—ಹಾಗೆ ಅದನ್ನು ರಿಸರ್ವ್ ಮಾಡಲು ಕಾರಣಗಳೇನು, ಸ್ವಾಮಿ ?

ಶ್ರೀ ಕಡಿದಾಳ್ ಮಂಜಪ್ಪ.—ಹುಲ್ಲು ಬೆಳೆಯಲಿಕ್ಕೆ ಅನುಕೂಲವಾಗಿದೆ, ಕ್ಷಾಮಕಾಲದಲ್ಲಿ ಹುಲ್ಲಿನ ಸೌಕರ್ಯಕ್ಕೆ ಇದರಿಂದ ಉಪಯೋಗವಿದೆ, ಅಲ್ಲದೆ ಇದು ವ್ಯವಸಾಯಕ್ಕೆ ಉತ್ತಮವಾದ ಭೂಮಿಯಲ್ಲ ಎಂಬ ನಾನಾ ಕಾರಣಗಳಿಗಾಗಿ ಇದನ್ನು ಹಾಗೆ ನಿಲ್ಲಿಸಲಾಗಿದೆ.

ಶ್ರೀ ಎಸ್. ಎಂ. ಮರಿಯಪ್ಪ.—ತಾವು ಖುಷ್ಕಿ ಜಮೀನುಗಳ ಬೆಲೆಯನ್ನು ಇತ್ತೀಚೆಗೆ ಹೆಚ್ಚಿಸಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಹೆಚ್ಚಿಸಿಲ್ಲ. ಖುಷ್ಕಿ ಜಮೀನಿನ ಪರಮಾವಧಿ ಬೆಲೆಯನ್ನು ಗೊತ್ತುಮಾಡಿದ್ದಾರೆ.

ಶ್ರೀ ಎಸ್. ಎಂ. ಮರಿಯಪ್ಪ.—ಆದರೆ ದರಖಾಸ್ತುಗಳಲ್ಲಿ 50 ರೂಪಾಯಿಗಳ ಬೆಲೆಗಿಂತಲೂ ಕಡಮೆ ಕಿಮ್ಮತ್ತಿನಲ್ಲಿ ಜಮೀನನ್ನು ಕೊಡಲಾಗುವುದಿಲ್ಲವೆಂದು ದರಖಾಸ್ತುಗಳನ್ನು ತಿರಸ್ಕಾರ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—50 ರೂಪಾಯಿಗಳಿಗಿಂತಲೂ ಕಡಮೆ ಬೆಲೆಗೆ ಜಮೀನುಗಳನ್ನು ಕೊಡಲೇ ಬಾರದೆಂದೇನೂ ಹೇಳಿಲ್ಲ. ಕಡಮೆ ಬೆಲೆಗೂ ಸಹ ಕೊಡಬಹುದೆಂಬ ಬಗ್ಗೆ ಸರ್ಕ್ಯುಲರನ್ನು ಕೊಟ್ಟಿದ್ದೇವೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ರೆವೆನ್ಯೂ ಕಮಿಷನರೂ ಮತ್ತು ಡೆಪ್ಯುಟಿ ಕಮಿಷನರೂ ಹಿಂದೆ ಮಾಡಿದ್ದ ವರದಿ ತಮ್ಮಲ್ಲಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ನನ್ನಲ್ಲಿ ಈಗ ಹಾಜರಿಲ್ಲ.

ಶ್ರೀ ಎಚ್. ಟಿ. ಪುಟ್ಟಪ್ಪ.—ಅದರಲ್ಲಿ ಅವರು ಏನು ವರದಿ ಮಾಡಿದ್ದರು ?

ಶ್ರೀ ಕಡಿದಾಳ್ ಮಂಜಪ್ಪ.—ಅವರು ಡಿಮ್ಯಾಂಡ್ ಮಾಡುತ್ತಿರುವ ಕಡೆ ಈಚಲು ಮರಗಳಿರುತ್ತವೆಂದು ವರದಿ ಮಾಡಿದ್ದಾರೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತಾವು ಹಾಗೆ 50 ರೂಪಾಯಿಗಳಿಗಿಂತ ಕಡಮೆ ಕಿಮ್ಮತ್ತಿಗೆ ಜಮೀನುಗಳನ್ನು ಕೊಡಬಾರದೆಂದು ಮಾಡಿರುವುದರಿಂದ ದರ ಖಾಸ್ತು ಅರ್ಜಿಗಳು ಬರುವುದೇ ಕಡಮೆಯಾಗಿರುತ್ತವೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ನಿರ್ಬಂಧವನ್ನೇನೂ ಮಾಡಿಲ್ಲ. ಆ ಬಗ್ಗೆ ಮಾಡಿಫೈಡ್ ಆರ್ಡರುಗಳನ್ನೂ ಸರ್ಕ್ಯುಲರ್‌ಗಳನ್ನೂ ಕಳುಹಿಸಿದ್ದೇವೆ. ಹಾಗೆ ನಿರ್ಬಂಧ ಮಾಡತೂಡನೆಂದು ತಿಳಿಸಲಾಗಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅಧಿಕಾರಿಗಳು ರಿಕಾರ್ಡನ್ನು ಬಿರ್ಡ್‌ಅಫ್ ಮಾಡುವಾಗ ಅದನ್ನು ಬದಲಾಯಿಸಲು ಅವಕಾಶವಿಲ್ಲವೇ ?

(ಉತ್ತರವಿಲ್ಲ.)

12-30 P.M.

Sri H. C. LINGA REDDY.—Have the Government passed any order on the recommendations of the Date Grove Committee that lands should not be granted to darkhastdars ?

Sri Kadidal MANJAPPA.—No. The Date Grove Committee was constituted about two years ago and Government have not yet passed any orders to that effect.

Sri H. C. LINGA REDDY.—Has it not come to the notice of Government that date grove lands have been disposed of to the Harijans of Goribidnur Taluk, Sir ?

Sri Kadidal MANJAPPA.—Yes; where the Date Grove Committee have opined that the lands can be disposed of.

Sri H. C. LINGA REDDY.—Shall I take it that Date Grove Committee will go into each application whether it should be given or not.

Sri Kadidal MANJAPPA.—The Committee have reported that certain areas can be disposed of for cultivation.

Sri H. C. LINGA REDDY.—Have they said that this piece of land should not be disposed of for cultivation ?

Sri Kadidal MANJAPPA.—They have also mentioned that a number of date groves which cannot be disposed of for cultivation should be reserved.